# ಇದೇ ೨೧ರಂದು ಮುರುಘಾಮಠದಲ್ಲಿ ಸೂರ್ಯಗ್ರಹಣ ವೀಕ್ಷಣೆ

**ನಿಸರ್ಗಪ್ರಧಾನವಾದ ಕಂಕಣ ಸೂರ್ಯಗ್ರಹಣ** ದಿನಾಂಕ : 21-06-2020ರಂದು ಸಂಭವಿಸಲಿದ್ದು, ಅದರ ಪರಿಣಾಮ ಮತ್ತು ತೀವ್ರತೆ ಬಗ್ಗೆ ಮಾಧ್ಯಮಗಳಲ್ಲಿ ವಿಭಿನ್ನ ಚರ್ಚೆಗಳು ನಡೆಯುತ್ತಿವೆ. ಜ್ಯೋತಿಷಿಗಳು ಅಂದು ಪ್ರಪಂಚವೆ ಮುಳುಗಿ ಹೋಗುತ್ತದೆ, ಪ್ರಳಯವಾಗುತ್ತದೆ ಎಂದು ಮೊದಲಾಗಿ ಜನರಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ. ಈ ಮೊದಲೆಲ್ಲ ನಡೆದ ಸೂರ್ಯ - ಚಂದ್ರಗ್ರಹಣಗಳಲ್ಲಿ ಇದೇ ಭಯ ಇದ್ದರೂ ಏನೂ ಸಂಭವಿಸದಂತೆ ಸಹಜವಾದ ಪ್ರಕ್ರಿಯೆ ನಡೆದುಹೋಗಿದೆ. ಶ್ರೀಮಠದಲ್ಲಿ ಅಂತಹ ಸಂದರ್ಭದಲ್ಲಿ ಅನೇಕ ವಿವಾಹಗಳನ್ನು ಮಾಡಲಾಗಿದೆ. ಗ್ರಹಣವನ್ನು ನೋಡುತ್ತಲೇ ಪ್ರಸಾದವನ್ನು ಸಾರ್ವಜನಿಕರೊಟ್ಟಿಗೆ ಏರ್ಪಡಿಸಲಾಗಿದೆ. ಪ್ರಕೃತಿ ಸಹಜವಾದ ಕ್ರಿಯೆ ಬಂದು ಹೋಗುವ ವಿಸ್ಮಯವನ್ನು ನೋಡಿ ಜನರು ಕಣ್ತುಂಬಿಕೊಳ್ಳಬೇಕು. ಇಂತಹ ಅದ್ಭುತ ನಮಗೆ ಮತ್ತೆ ಸಿಗಲು ನೂರಾರುವರ್ಷ ಕಾಯಬೇಕಿದೆ. ಬಂದಿರುವ ಸಂದರ್ಭವನ್ನು ಯಾರೂ ಭಯಪಡದೆ, ಮೂಢನಂಬಿಕೆಗಳಿಗೆ ಒಳಗಾಗದೆ ಆಸ್ವಾದಿಸಬೇಕು. ಹಾಗಾಗಿ ದಿ. 21-06-20ರಂದು 11 ಗಂಟೆಯಿಂದ ಶ್ರೀಮಠಕ್ಕೆ ಸಾರ್ವಜನಿಕರನ್ನು ಆಹ್ವಾನಿಸುವುದರ ಮೂಲಕ ಗ್ರಹಣ ನೋಡುತ್ತಲೆ ಮಧ್ಯಾಹ್ನದ ಪ್ರಸಾದವನ್ನು ಶ್ರೀಮಠದ ಅನುಭವ ಮಂಟಪದ ಮುಂದೆ ಏರ್ಪಡಿಸಲಾಗಿದೆ. ಇಂತಹ ಅವಕಾಶಗಳಿಂದ ವಂಚಿತರಾಗದೆ ಜನರು ಗ್ರಹಣದ ವೀಕ್ಷಣೆ ಮಾಡಬಹುದು. ಅದೇ ಸಂದರ್ಭದಲ್ಲಿ ಬೆಳಗ್ಗೆ 11 ಗಂಟೆಯಿಂದ ಡಾ. ಶಿವಮೂರ್ತಿ ಮುರುಘಾ ಶರಣರು ಸೂರ್ಯಗ್ರಹಣದ ಅಮಂಗಲ ನಿವಾರಣೆ; ಪ್ರಬುದ್ಧ ಚಿಂತನೆ ವಿಷಯವಾಗಿ ಸಾರ್ವಜನಿಕರಿಗೆ ವಾಟ್ಸಪ್ ಮೂಲಕ ಕೇಳಲಾಗಿರುವ ಪ್ರಶ್ನೆಗಳಿಗೆ ಫೇಸ್‌ಬುಕ್ ಹಾಗೂ ಯುಟ್ಯೂಬ್‌ನಲ್ಲಿ ಉತ್ತರಿಸುತ್ತಾರೆ. ಅದರ ನೇರ ಪ್ರಸಾರವನ್ನು ಕೆಳಗಿನ ಐಡಿಯಿಂದ ವೀಕ್ಷಿಸಬಹುದು.

**Face book :** Dr shivamurthy murugha sharanaru

**Youtube:** Sri Murugha Matha Chitradurga